

‘ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು’ವಿನ ಮಕ್ಕಳ ಪಟಾಲಂ

‘ಶುದ್ಧಿ’ (ನಿ: ಆದರ್ಶ್ ಈಶ್ವರಪ್ಪ) ಹಾಗೂ ‘ಚೌಕ’ (ನಿ: ತರುಣ್ ಸುಧೀರ್) ಚಿತ್ರಗಳ ಮೂಲಕ ಹೊಸ ನಿರ್ದೇಶಕರು ಭರವಸೆ ಹುಟ್ಟಿಸಿದ್ದರು. ಗಿರಿರಾಜ್ ನಿರ್ದೇಶನದ ‘ಅಮರಾವತಿ’, ನಾಗಾಭರಣರ ‘ಅಲ್ಲಮ’, ಜಯತೀರ್ಥರ ‘ಬ್ಯೂಟಿಫುಲ್ ಮನಸುಗಳು’, ಯೋಗರಾಜ ಭಟ್‌ರ ‘ಮುಗುಳುನಗೆ’ ಚಿತ್ರಗಳು ತೆರೆಕಂಡಿದ್ದೂ 2017ರಲ್ಲೇ. ಪುನೀತ್‌ರ ‘ರಾಜ್‌ಕುಮಾರ್’ ಕನ್ನಡ ಚಿತ್ರರಂಗದ ಬಹು ಯಶಸ್ವೀ ಚಿತ್ರಗಳ ಪಟ್ಟಿಗೆ ಸೇರಿದ್ದು ಕಳೆದ ವರ್ಷವೇ. ‘ತಾರಕ್’, ‘ಭರ್ಜರಿ’, ‘ಕಾಫಿತೋಟ’, ‘ಆಪರೇಷನ್ ಅಲಮೇಲಮ್ಮ’, ‘ಹೆಬ್ಬುಲಿ’, ‘ಮಫ್ತಿ’ – ಹೀಗೆ ಸಾಲು ಸಾಲು ಕಮರ್ಷಿಯಲ್ ಚಿತ್ರಗಳು ತೆರೆಕಂಡಿದ್ದವು. ಈ ಹಿನ್ನೆಲೆಯಲ್ಲಿ 2018ನ್ನು ನೋಡಿದರೆ, ಒಂದೇ ವರ್ಷದಲ್ಲಿ ಚಿತ್ರರಂಗ ಮಗ್ಗುಲು ಬದಲಿಸಿದಂತೆ ಕಾಣಿಸುತ್ತದೆ.

ಸೋಲುಗಳ ನಡುವೆಯೂ ಅಭಯಸಿಂಹ ನಿರ್ದೇಶನದ ‘ಪಡ್ಡಾಯಿ’ ಚಿತ್ರದ ನೈತಿಕ ಯಶಸ್ಸನ್ನು ಗುರ್ತಿಸಬೇಕು. ಪ್ರಾದೇಶಿಕ ಚಿತ್ರಗಳ ವಿಭಾಗದಲ್ಲಿ ಅತ್ಯುತ್ತಮ ತುಳು ಚಿತ್ರ ರಾಷ್ಟ್ರಪ್ರಶಸ್ತಿ ಪಡೆಯುವುದರ ಜೊತೆಗೆ, ಅತ್ಯುತ್ತಮ ತೃತೀಯ ಸಿನಿಮಾ ರಾಜ್ಯಪ್ರಶಸ್ತಿಗೆ ‘ಪಡ್ಡಾಯಿ’ ಆಯ್ಕೆಯಾಗಿರುವುದು ವಿಶೇಷ.



ಸತ್ಯವನ್ನು ಹುಡುಕುತ್ತ ಹೊರಟ ‘ಒಂದಲ್ಲಾ ಎರಡಲ್ಲಾ’ ಚಿತ್ರದ ಸಮೀರ

## ಸ್ಟಾರ್ ನಟರ ಮಂಪರು

ಯಶ್‌ರ ‘ಕೆಜಿಎಫ್’ ಹಾಗೂ ಶಿವರಾಜ್‌ಕುಮಾರ್–ಸುದೀಪ್ ಜೋಡಿಯ ‘ದಿ ವಿಲನ್’ ಹೊರತುಪಡಿಸಿದರೆ 2018ರಲ್ಲಿ ತಾರಾ ವರ್ಚಸ್ಸಿನ ನಾಯಕ ನಟರ ಬೇರ್‍ಯಾವ ಚಿತ್ರವೂ ತೆರೆಕಾಣಲಿಲ್ಲ. ಪುನೀತ್, ದರ್ಶನ್‌ರ ಒಂದು ಚಿತ್ರವೂ ತೆರೆಕಾಣಲಿಲ್ಲ. ಪ್ರೇಮ್ ನಿರ್ದೇಶನದ ‘ದಿ ವಿಲನ್’ ಕೂಡ ಅಬ್ಬರಿಸಿತೇ ಹೊರತು ಅರಳಲಿಲ್ಲ. ಶಿವಣ್ಣ–ಸುದೀಪ್‌ರ ಅಪೂರ್ವ ಜೋಡಿಯಿದ್ದರೂ ‘ವಿಲನ್’ ತನ್ನ ಶೀರ್ಷಿಕೆಯನ್ನು ತನ್ನಷ್ಟಕ್ಕೆ ತಾನು ನಿಜಪಡಿಸುವುದಕ್ಕಾಗಿಯೇ ತುಡಿಯುತ್ತಿದ್ದಂತೆ ಕಾಣಿಸಿತು.

ಗಣೇಶ್, ದುನಿಯಾ ವಿಜಯ್‌ರಂಥ ನಟರು ಕೂಡ ಪ್ರೇಕ್ಷಕರನ್ನು ಸೆಳೆಯುವಲ್ಲಿ ವಿಫಲರಾದರು. ‘ಕನಕ’ ಹಾಗೂ ‘ಜಾನಿ ಜಾನಿ ಎಸ್ ಪಪ್ಪ’ ಚಿತ್ರಗಳ ವಿಜಯ್ ತೆರೆಯ ಮೇಲಿಗಿಂತಲೂ ನಿಜ ಜೀವನದಲ್ಲೇ ಹೆಚ್ಚು ಸುದ್ದಿಮಾಡಿದರು. ಗಣೇಶ್‌ರ ‘ಆರೆಂಜ್’ನಲ್ಲಿ ಪ್ರೇಕ್ಷಕರಿಗೆ ಹುಳಿಯೂ ಕಾಣಿಸಲಿಲ್ಲ, ಸಿಹಿಯೆಂದೂ ಅನ್ನಿಸಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಭರವಸೆ ನವೀಕರಿಸುತ್ತಿದ್ದ ‘ಹೊಸ ಅಲೆ’ಯ ಸುಳಿವೂ 2018ರಲ್ಲಿ ಕಾಣಿಸಲಿಲ್ಲ.

## ನಾಯಕಿಯರ ಹಿನ್ನಡೆ

ಕನ್ನಡ ಚಿತ್ರರಂಗದ ಪಾಲಿಗೀಗ ಕನ್ನಡತಿಯರ ಬರಗಾಲದ ಕಾಲ. ಕಳೆದೊಂದು ದಶಕದಿಂದ ಪ್ರತಿಭಾವಂತ ನಟಿಯಾಗಿ ಗುರ್ತಿಸಲಾಗುತ್ತಿದ್ದ ರಾಧಿಕಾ ಪಂಡಿತ್ ದಾಂಪತ್ಯ–ತಾಯ್ತನದ ಮೂಲಕ ಕೌಟುಂಬಿಕ ವ್ಯಕ್ತಿಯಾಗಿದ್ದಾರೆ. ಮೇಘನಾ ರಾಜ್, ಐಂದ್ರಿತಾ ಕೂಡ ದಾಂಪತ್ಯದ ಹೊಸ್ತಿಲು ತುಳಿದಿದ್ದಾರೆ. ಆರಂಭದಲ್ಲಿ ಭರವಸೆ ಮೂಡಿಸಿದ್ದ ರಚಿತಾ ರಾಮ್ ಈಗ ಕಿರುತೆರೆಯಲ್ಲಿ ಕಾಣಿಸುವುದೇ ಹೆಚ್ಚು.

ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಸುದ್ದಿ ಮಾಡಿದ್ದ ಶ್ರುತಿ ಹರಿಹರನ್ ‘ಮೀ ಟೂ’ ಪ್ರಕರಣದ ನಂತರ ಚಿತ್ರರಂಗದ ಪಾಲಿಗೆ ಒಮ್ಮೆಗೇ ಅಪಥ್ಯವಾಗಿದ್ದಾರೆ. ಮತ್ತೊಬ್ಬ ಪ್ರತಿಭಾವಂತ ನಟಿ ಶ್ರದ್ಧಾ ಶ್ರೀನಾಥ್ ಅವರು ಕೂಡ ಗಾಂಧಿನಗರದಲ್ಲಿ ಹೆಚ್ಚು ಸುದ್ದಿಯಲ್ಲಿಲ್ಲ. ಇನ್ನು ರಾಗಿಣಿ ಅವರ ಪಾಲಿಗೆ ತುಪ್ಪದ ವ್ಯಾಪಾರ ಕಳೆಗುಂದಿದಂತಿದೆ. ‘ಕಿರಿಕ್ ಪಾರ್ಟಿ’ಯ ನಗುಮೊಗದ ಚೆಲುವೆ ರಶ್ಮಿಕಾ ಮಂದಣ್ಣ ತೆಲುಗು ಚಿತ್ರಗಳಲ್ಲಿ ಬಿಜಿಯಾಗುತ್ತಾ